ಕುಮುದಾ ಪುರುಷೋತ್ತಮ್

# ದೀರ್ಘಾಯುಸ್ಸು



“ವಾಣೀ... ವಾಣೀ... ಇನ್ನೂ ತಿಂಡಿ ಮಾಡಿಲ್ವೇನೇ? ಆಗ್ಲೇ ಹತ್ತು ಗಂಟೆ ಆಯ್ತು. ನಾನು ಇನ್ನೂ ಎಷ್ಟು ಹೊತ್ತು ಹಸಿದ್ಕೊಂಡಿರ್ಲಿ? ಬೇಗ ತಿಂಡಿ ತಂದ್ಕೊಡೇ.”

ಒಳಗೆ ಕುಕ್ಕರ್ ಜೋಡಿಸುತ್ತಿದ್ದ ವಾಣಿ ಅದನ್ನು ಮುಗಿಸಿ ಹಣೆಯಮೇಲೆ ಮೂಡಿದ್ದ ಬೆವರಿನ ಮಣಿಗಳನ್ನು ಸೆರಗಿನಿಂದ ಒರೆಸಿಕೊಳ್ಳುತ್ತಾ ನೋಯುತ್ತಿದ್ದ ತೊಡೆಗಳನ್ನು ಹಾಗೇ ನವಿರಾಗಿ ನೀವಿಕೊಳ್ಳುತ್ತಾ ಕುಂಟುತ್ತಾ ಅವಳತ್ತೆ ಕುಳಿತಲ್ಲಿಗೆ ಬಂದಳು.

“ಅತ್ತೆ, ಅರ್ಧ ಗಂಟೆಗೆ ಮುನ್ನ ಇಡ್ಲಿ ಚಟ್ನಿ ತಿಂದಿದ್ದು ಮರೆತುಬಿಟ್ರಾ?”

“ನಾನೆಲ್ಲೇ ತಿಂದೆ? ತಿಂದಿದ್ರೆ ಮತ್ತೆ ಕೇಳ್ತಿದ್ನಾ? ನನಗಂಥಾ ದುರಾಸೆ ಇಲ್ಲ.”

“ಸ್ವಲ್ಪ ಹೊತ್ತಿಗೆ ಮುಂಚೆ ನಿಮಗೆ ನಾನು ಬಚ್ಚಲುಮನೇಲಿ ಸ್ನಾನಕ್ಕೆ ಸಹಾಯ ಮಾಡಿದ್ದು, ಎಣ್ಣೆಹಚ್ಚಿ ತಲೆ ಬಾಚಿದ್ದು, ಇಡ್ಲಿ ಚಟ್ನಿ ಕೊಟ್ಟಿದ್ದು, ಚಟ್ನಿ ಖಾರ ಖಾರ ಅಂತ ಹೇಳ್ತಾನೇ ನೀವು ತಟ್ಟೆ ಖಾಲಿಮಾಡಿದ್ದು, ಎಲ್ಲಾ ಜ್ಞಾಪಿಸಿಕೊಳ್ಳಿ ನೋಡೋಣ.”

“ನಾನೇನು ಸುಳ್ಳು ಹೇಳ್ತೀನೇನೇ? ತೊಂಬತ್ತೈದು ವರ್ಷಗಳಾಯ್ತು. ಈ ವಯಸ್ನಲ್ಲಿ ನಾನು ಸುಳ್ಳು ಹೇಳಿ ಯಾವ ನರಕಕ್ಕೆ ಹೋಗ್ಲಿ? ಹೋಗ್ಲಿ ಬಿಡು. ನೀ ಕೊಡ್ಬೇಡ. ನಾನು ಉಪ್ವಾಸ ಮಾಡಿ ಸಾಯ್ತೀನಿ,” ಕೋಪಿಸಿಕೊಂಡು ಕುಳಿತರು.

ಪಾಪ ವಯಸ್ಸಾಗಿದೆ. ಅರುಳುಮರಳು ಜೊತೆಗೆ ಮರೆವು ಬೇರೆ. ಇವತ್ತೆಲ್ಲಾ ಕೇಳ್ತಿರೋದು ತಿಂಡಿತಾನೇ. ಕೊಟ್ಟಿದ್ದು ಸಾಕಾಗ್ಲಿಲ್ವೋ ಏನೋ. ಇನ್ನೂ ಸ್ವಲ್ಪ ಕೊಟ್ಟು ನೋಡೋಣ ಎಂದುಕೊಂಡು ಮಿಕ್ಕಿದ್ದ ಎರಡು ಇಡ್ಲಿ ಜೊತೆ ಆಗ್ಲೆ ಫ್ರಿಡ್ಜು ಸೇರಿದ್ದ ಚಟ್ನಿ, ಮೇಲೆ ಒಂದು ಮಿಳ್ಳೆ ತುಪ್ಪ ಹಾಕಿ ತಂದು ಕುಳಿತಲ್ಲೇ ತೂಕಡಿಸುತ್ತಿದ್ದ ಅತ್ತೆಯನ್ನು ಎಬ್ಬಿಸಿ ಮುಂದೆ ಹಿಡಿದಳು. ಮೆಲ್ಲನೆ ಕಣ್ತೆರೆದವರು – “ನಂಗೆ ಹಸ್ವಿಲ್ಲ. ಪದೇ ಪದೇ ತಿಂದ್ರೆ ಈ ವಯಸ್ನಲ್ಲಿ ಮೈಗೆ ಆಗುತ್ತೇನೇ,” ಎಂದು ಮತ್ತೆ ನಿದ್ದೆಗೆ ಜಾರಿದರು!

★★★

ವಾಣಿ ಅತ್ತೆಗೆ ಹಿರಿಯ ಸೊಸೆ. ಆ ಸ್ಥಾನಕ್ಕೆ ತಕ್ಕಂತೆ ಸೇರಿದ ಕುಟುಂಬಕ್ಕೆ ಹೊಂದಿಕೊಂಡು ಎಲ್ಲಾ ಜವಾಬ್ದಾರಿಗಳನ್ನು ಹೊತ್ತುಕೊಂಡು ತನ್ನ ಕರ್ತವ್ಯಗಳನ್ನು ನಿಭಾಯಿಸಿದ್ದಳು. ಅವಳ ಗಂಡ ಹರಿ ನಿವೃತ್ತಿಯ ನಂತರ ವಯಸ್ಸಾದ ತಾಯಿಯ ಶುಶ್ರೂಷೆಯಲ್ಲಿ ಅಷ್ಟೋ ಇಷ್ಟೋ ತನ್ನ ಕೈಯ್ಯೂ ಜೋಡಿಸುತ್ತಿದ್ದ. ಒಂದು ಕಾಲದಲ್ಲಿ ಜನರಿಂದ ತುಂಬಿದ್ದ ಮನೆಯಲ್ಲಿ ಈಗ ಇದ್ದುದು ವಾಣಿ, ಗಂಡ ಹರಿ ಹಾಗೂ ಅವಳ